**ಕಾರ್ಮಿಕ ನ್ಯಾಯಾಲಯ, ಮೈಸೂರು.**

**IID**: 2/2025

ಡಬ್ಲ್ಯೂ.ಡಬ್ಲ್ಯೂ-1

**ದಿನಾಂಕ 07.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀಮತಿ. ಪಿ.ಎಸ್. ವಕೀಲರಿಂದಃ**

ನಾನು ನ್ಯಾಯಾಲಯದ ಮುಂದು ಹಾಜರು ಪಡಿಸಿರುವ ಸಿ.ಡಿ. ಯಲ್ಲಿ ನಾನು ಮತ್ತು ಬಲರಾಮ ಕೃಷ್ಣ.ಡಿ ರವರು ಭದ್ರತಾ ಸಿಬ್ಬಂದಿಯವರ ಜೊತೆ ಮಾತನಾಡಿರುವ ವಿಚಾರ ಇರುತ್ತದೆ. ನಾನು ಹಾಜರು ಮಾಡಿರುವ ಸಿ.ಡಿ.ಯನ್ನು ಈ ಪ್ರಕರಣಕೊಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಆಂತರಿಕ ವಿಚಾರಣೆ ನಡೆಯುತ್ತಿರುತ್ತದೆ. ಸದರಿ ವಿಚಾರಣೆಯ ನೋಟಿಸ್ ಈ ಪ್ರಕರಣ ದಾಖಲಾದ ನಂತರ ಬಂದಿರುತ್ತದೆ. ಸದರಿ ವಿಚಾರಣೆಯಲ್ಲಿ ಮೊದಲ ಸುನಾವಣೆ ದಿನಾಂಕಃ31.07.2025 ರಲ್ಲಿ ನಡೆದಿರುತ್ತದೆ ಎಂದರೆ ಸರಿ. ಸದರಿ ವಿಚಾರಣೆಯಲ್ಲಿ ನಾನು ಈಗಲೂ ಸಹಾ ಭಗವಹಿಸುತ್ತಿದ್ದೇನೆ. ಸದರಿ ಪ್ರಕರಣದಲ್ಲಿ ಈಗ ಆಡಳಿತ ವರ್ಗದ ವಿಚಾರಣೆ ನಡೆಯುತ್ತಿರುತ್ತದೆ.

ದಿನಾಂಕಃ09.06.2025 ರ ಪತ್ರವನ್ನು ಆಡಳಿತ ವರ್ಗದವರು ನಿರಾಕರಣೆ ಮಾಡಿರುತ್ತಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ by-hand ಪಡೆದುಕೊಂಡಿರುತ್ತಾರೆ, ಸ್ವಿಕೃತಿ ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಮುಂದುವರೆದು register post ಮಾಡಿದಾಗ addressee refused ಎಂದು ಬಂದಿರುತ್ತದೆ ಎನ್ನುತ್ತಾರೆ. ನಾನು ಈಗ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. 2 ನೇ ಪಕ್ಷಗಾರರ ಸಂಸ್ಥೆಯವರು ನನ್ನನ್ನು ಕೆಲಸದಿಂದ ತೆಗೆದು ಹಾಕಿಲ್ಲ, ನಾನು ನ್ಯಾಯಾಲಯದ ಮುಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ಮುಂದೆ ನಾನು ಸಲ್ಲಿಸಿರುವ claim ಅರ್ಜಿಯು ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**